

ಕಲಾವಿದನ ಕಲ್ಪನೆಯಲ್ಲಿ ಆರೂವರೆ ಕೋಟಿ ವರ್ಷಗಳ ಹಿಂದೆ ಭೂಮಿಯನ್ನು ಅಪ್ಪಳಿಸುತ್ತಿರುವ ಒಂದು ಕ್ಷುದ್ರಗ್ರಹ. ಚಿತ್ರಕೃಪೆ: ನಾಸಾ

ಸುಮಾರು 65 ದಶಲಕ್ಷ (ಆರೂವರೆ ಕೋಟಿ) ವರ್ಷಗಳಷ್ಟು ಹಿಂದಿನ ಕಾಲ.

ಇಂದಿನಂತೆ ಭೂಮಿ ಅಂದೂ ಲಕ್ಷಾಂತರ ಬಗೆಯ ಜೀವಿಗಳ ತಾಣವಾಗಿದ್ದರೂ ಮನುಷ್ಯರಿರಲಿ, ದೊಡ್ಡ ಸಸ್ತನಿಗಳೂ (ಮ್ಯಾಮಲ್ಸ್) ಆಗ ಅಸ್ತಿತ್ವದಲ್ಲಿರಲಿಲ್ಲ. ಬದಲಾಗಿ ದೈತ್ಯ ಸರೀಸೃಪಗಳು (ಡೈನೊಸಾರ್ಸ್) ಭೂಮಿಯ ಮೇಲೆ ತಮ್ಮ ಅಧಿಪತ್ಯವನ್ನು ಸಾಧಿಸಿದ್ದವು. ಅವುಗಳಿಗೆ ಸೆಡ್ಡು ಹೊಡೆಯುವ ಬೇರಾವ ಜೀವಿಯೂ ಅಂದು ಇಲ್ಲಿ ಇರಲಿಲ್ಲವಾಗಿ ಯಾರಾದರೂ ಭೂಮ್ಯಾತೀತ ಬುದ್ಧಿಜೀವಿಗಳು (ಇದ್ದಲ್ಲಿ!) ಇಲ್ಲಿಗೇನಾದರೂ ಬಂದಿದ್ದರೆ, ‘ಭೂಮಿ ಸರೀಸೃಪಗಳ ಲೋಕ’ ಎಂದವರು (ಅದು?) ತೀರ್ಮಾನಿಸುವ ಸಾಧ್ಯತೆಯಿತ್ತು.

ಆ ವೇಳೆಯಲ್ಲಿ ಒಂದು ದಿನ ಸುಮಾರು ಹತ್ತು ಕಿಲೋಮೀಟರ್ ಅಗಲವಿದ್ದ, ಅಂದರೆ ಸುಮಾರಾಗಿ ಮೌಂಟ್ ಎವರೆಸ್ಟ್‌ನಷ್ಟಿದ್ದ ದೈತ್ಯ ಕ್ಷುದ್ರಗ್ರಹವೊಂದು (ಆಸ್ಟರಾಯ್ಡ್) ದುರದೃಷ್ಟವಶಾತ್ ಭೂಮಿಯನ್ನೇ ಗುರಿಯನ್ನಾಗಿಟ್ಟುಕೊಂಡು ಗಂಟೆಗೆ ಸುಮಾರು ಒಂದು ಲಕ್ಷ ಕಿಲೋಮೀಟರ್‌ಗಳಷ್ಟು ಅಪಾರವಾದ ವೇಗದಲ್ಲಿ ಅದರ ಸಮೀಪಕ್ಕೆ ಧಾವಿಸಿತು. ನಂತರ ಅದು ಭೂಮಿಯನ್ನು ಇಂದು ಮೆಕ್ಸಿಕೊ ದೇಶದ ದಕ್ಷಿಣ ಭಾಗದಲ್ಲಿನ ಯುಕಟಾನ್ ಪರ್ಯಾಯದ್ವೀಪದಲ್ಲಿರುವ ಚಿಕ್ಸುಲೂಬ್ ಎಂದು ಕರೆಯಲಾಗುವ ಪ್ರದೇಶದ ಸಮೀಪದಲ್ಲಿ ಅಪ್ಪಳಿಸಿತು. ಅದರಿಂದಾದ 150 ಕಿಲೋಮೀಟರ್ ಅಗಲವಿರುವ ಬೃಹತ್ ಹೊಂಡ ಇಂದು ಸಮುದ್ರದೊಳಗೆ ಹೂತುಹೋಗಿದೆ.

ಈ ಘಟನೆಯಿಂದಾದ ಅನಾಹುತದಿಂದಾಗಿ ಅಲ್ಪಕಾಲದಲ್ಲೇ ಡೈನೊಸಾರ್‌ಗಳೂ ಸೇರಿದಂತೆ ಭೂಮಿಯ ಮೇಲಿನ ಜೀವಿಗಳ ಶೇ.75ರಷ್ಟು ಭಾಗ ನಶಿಸಿಹೋದವು. ಅನಾಹುತ ನಡೆಯದಂತೆ ತಡೆಯುವ ಸಾಮರ್ಥ್ಯ ಆ ದೈತ್ಯಜೀವಿಗಳಿಗಿರಲಿಲ್ಲ. ಇದು ಮುಂದೆ ಸಣ್ಣ ಪುಟ್ಟ ಜೀವಿಗಳಾಗಿದ್ದ ಸಸ್ತನಿಗಳು (ಮ್ಯಾಮಲ್ಸ್) ಪ್ರವರ್ಧಮಾನಕ್ಕೆ ಬರಲು ಕಾರಣವಾಯಿತು.

ಭೂಮಿಯ ಇತಿಹಾಸದಲ್ಲಿ ಇಂತಹ ಘಟನೆಗಳು ಕೆಲವು ಬಾರಿ ನಡೆದಿವೆಯೆಂದು ವಿಜ್ಞಾನಿಗಳು

